## ನಿಷ್ಠೂರದನಿ

# ಕೊಲೆಗಾರನಿಗೆ ಶಿಕ್ಷೆ ಬೇಡವೆ?

ಅತ್ಯಾಚಾರ, ಕೊಲೆ ಮಾಡಿದ ಆರೋಪಿಗಳಲ್ಲಿ ಬಹುತೇಕರಿಗೆ ಶಿಕ್ಷೆ ಆಗುವುದೇ ಇಲ್ಲ! ಹಾಗೆ ಶಿಕ್ಷೆಯಿಂದ ಪಾರಾಗುವವರ ಸಂಖ್ಯೆ ಶೇ.70ನ್ನೂ ದಾಟಿದೆ. ಸ್ವತಃ ರಾಜ್ಯ ಹೈಕೋರ್ಟ್ ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದು, ತಪ್ಪಿತಸ್ಥರಿಗೆ ಶಿಕ್ಷೆಯಾಗಲು ಸೂಕ್ತ ಯೋಜನೆಗಳನ್ನು ರೂಪಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ. ಈ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ಸಹಕರಿಸುವಂತೆ ಅಡ್ವೋಕೇಟ್ ಜನರಲ್ ಅವರಿಗೂ ನ್ಯಾಯಾಲಯ ಸಲಹೆ ನೀಡಿದೆ.

ತನಿಖೆಯಲ್ಲಿ ಲೋಪ, ಪ್ರಾಸಿಕ್ಯೂಟರ್‌ಗಳ ವೈಫಲ್ಯ, ಪದೇ ಪದೇ ಪೊಲೀಸ್ ಅಧಿಕಾರಿಗಳ ವರ್ಗ, ಅರೆಮನಸ್ಸಿನ ತನಿಖೆ– ಇವೇ ಮುಂತಾದವು ತಪ್ಪಿತಸ್ಥರು ಶಿಕ್ಷೆಯಿಂದ ಪಾರಾಗಲು ಕಾರಣವಾಗಿವೆ ಎಂದೂ ಹೈಕೋರ್ಟ್ ಪಟ್ಟಿ ಮಾಡಿದೆ. ದರೋಡೆ, ಸುಲಿಗೆ ಪ್ರಕರಣಗಳಲ್ಲಿ ಸಮರ್ಪಕ ತನಿಖೆ ನಡೆಸದ ಬಗ್ಗೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ದೂರುಗಳ ಪರಿಶೀಲನೆ ನಡೆಸುವುದಿಲ್ಲವೆ? ಡಿಜಿಪಿ ಏನು ಮಾಡುತ್ತಿದ್ದಾರೆ? ಇದೇ ರೀತಿ ಮುಂದುವರಿದರೆ ಆಫ್ಘಾನಿಸ್ತಾನದಂತೆ ಆಗಬೇಕಾಗುತ್ತದೆ ಎಂದೂ ನ್ಯಾಯಾಲಯ ಕಟುವಾದ ಅಭಿಪ್ರಾಯ ವ್ಯಕ್ತಪಡಿಸಿದೆ.

ಅತ್ಯಾಚಾರ, ಕೊಲೆ ಪ್ರಕರಣದ ಆರೋಪಿಗಳು ಸಾಮಾನ್ಯವಾಗಿ ಸಾಕ್ಷಿಗಳ ಕೊರತೆಯಿಂದ ಬಚಾವಾಗಿಬಿಡುತ್ತಾರೆ. ಕೊಲೆ ಪ್ರಕರಣದ ಬಗ್ಗೆ ಸಿಕ್ಕುವ ಚಿಕ್ಕದೊಂದು ಸುಳಿವನ್ನು ಜತನದಿಂದ ಕಾಪಾಡಿ, ಅದಕ್ಕೆ ಪೂರಕವಾಗುವ ಅಂಶಗಳನ್ನು ಶೋಧಿಸುವ ನೈಪುಣ್ಯತೆಯ ಕೊರತೆ– ಸಾಕ್ಷಿಗಳು ನಾಶವಾಗಲು ಒಂದು ಕಾರಣವಾದರೆ; ಭ್ರಷ್ಟಾಚಾರ ಇದರ ಮತ್ತೊಂದು ಕರಾಳ ಮುಖವಾಗಿದೆ. ಕೊಲೆಗಾರನೊಂದಿಗೆ ಪೊಲೀಸರು ಮೊದಲೇ ಶಾಮೀಲಾಗಿಬಿಟ್ಟರೆ ಅಲ್ಲಿಗೆ ಆ ಪ್ರಕರಣದ ಕಥೆ ಮುಗಿದಂತೆ. ಮೊಕದ್ದಮೆಯನ್ನು ಕಾನೂನು ಪ್ರಕಾರ ದಾಖಲಿಸದಿರುವುದು, ಆರೋಪ ಪಟ್ಟಿ ಸಲ್ಲಿಸುವಾಗಲೇ ಕೊಲೆಗಾರನನ್ನು ಪಾರುಮಾಡುವ ತಂತ್ರ ರೂಪಿಸುವುದು– ಭ್ರಷ್ಟಾಚಾರದ ನಾನಾ ಮುಖಗಳು. ಕೆಲವು ಸಂದರ್ಭದಲ್ಲಿ ಬಾಡಿಗೆ ಬಂಟನನ್ನು ಅಥವಾ ಕೊಲೆಗಾರನಿಗೆ ಆಗದವನನ್ನು ಬಂಧಿಸಿ ಅವನ ವಿರುದ್ಧ ಆರೋಪ ಪಟ್ಟಿ ಸಲ್ಲಿಸಲಾಗುತ್ತದೆ! ಇಂತಹ ಪ್ರಕರಣಗಳು ನ್ಯಾಯಾಲಯದಲ್ಲಿ ಬಿದ್ದುಹೋಗುತ್ತವೆ. ಕೊಲೆಗಾರ ಪಾರಾಗಿ ಬಿಡುತ್ತಾನೆ. ಆರೋಪಿಯ ರಕ್ಷಣೆಗೆ ಕಾನೂನಿನ ಚಾಪೆ ಕೆಳಗೆ ತೂರುವ (ಕು)ತಂತ್ರ ಇದು.

ಅದಕ್ಷತೆ, ವಿಳಂಬ ಹಾಗೂ ತಾಂತ್ರಿಕ ಕಾರಣಗಳೂ ಕೆಲವು ಪ್ರಕರಣಗಳಲ್ಲಿ ಆರೋಪಿಗಳು ಪಾರಾಗಲು ಕಾರಣವಾಗುತ್ತವೆ. ಕೊಲೆ ಪ್ರಕರಣಗಳ ತನಿಖೆ ವೈಜ್ಞಾನಿಕ ವಿಧಾನದಲ್ಲಿ ನಡೆಯುತ್ತಿಲ್ಲ. ಈ ಬಗ್ಗೆ ಪೊಲೀಸರಿಗೆ ಸರಿಯಾದ ತರಬೇತಿ ಇಲ್ಲ. ತನಿಖೆ ನಡೆಯುವ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳನ್ನು ಹಠಾತಾಗಿ ವರ್ಗಾವಣೆ ಮಾಡಿದರೆ, ತನಿಖೆ ದಿಕ್ಕು ತಪ್ಪುತ್ತದೆ. ಪೊಲೀಸ್ ಇಲಾಖೆಯ ಒಳಗಡೆಯೇ ಗುಲಾಮಿ ಪದ್ಧತಿ ಇದೆ. ಕೆಳ ಹಂತದ ಎಷ್ಟೋ ಅಧಿಕಾರಿಗಳು ಪ್ರಾಮಾಣಿಕರು, ದಕ್ಷರು ಇದ್ದರೂ– ಅಲ್ಲಿರುವ ಗುಲಾಮಿ ಪದ್ಧತಿ ನಿಷ್ಪಕ್ಷಪಾತ ತನಿಖೆಗೆ ಅವಕಾಶ ನೀಡುತ್ತಿಲ್ಲ. ಆದ್ದರಿಂದ ಪೊಲೀಸ್ ಕಾಯ್ದೆಗೆ ತಿದ್ದುಪಡಿ ತರಬೇಕು. ಪೊಲೀಸರು ನಿಷ್ಠುರವಾಗಿ ನಡೆದುಕೊಂಡು ಅವರ ದಕ್ಷತೆ ಹೆಚ್ಚಿಸಿಕೊಳ್ಳಬೇಕಾದರೆ– ಸರಿಯಾದ ವೇತನ, ಭತ್ಯೆ ಸೇರಿದಂತೆ ಎಲ್ಲ ರೀತಿಯ ಸವಲತ್ತು ಹಾಗೂ ಶಿಕ್ಷಣವನ್ನು ಪೊಲೀಸರಿಗೆ ಒದಗಿಸಿಕೊಡಬೇಕು. ತನಿಖೆಗೆ ವೈಜ್ಞಾನಿಕ ವಿಧಾನ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ವ್ಯಾಪಕವಾದ ಸುಧಾರಣೆ ಕ್ರಮಗಳನ್ನು ಕೈಗೊಳ್ಳಬೇಕು. ಈ ಕೆಲವು ಸುಧಾರಣೆಗಳನ್ನು ರಾಜ್ಯ ಸರ್ಕಾರವೇ ಮಾಡಬೇಕಿದೆ. ಆದ್ದರಿಂದ ಹೈಕೋರ್ಟ್ ಈ ಕುರಿತು ರಾಜ್ಯಸರ್ಕಾರಕ್ಕೆ ನೀಡಿರುವ ಸೂಚನೆ ಸಮಂಜಸವಾಗಿದೆ.

‘ಅತ್ಯಾಚಾರ, ಕೊಲೆ ಪ್ರಕರಣಗಳ ತನಿಖೆ ತ್ವರಿತವಾಗಿ ಆಗಬೇಕು. ಆರೋಪ ಪಟ್ಟಿ ಸಲ್ಲಿಸಲು ಮೂರು ತಿಂಗಳ ಕಾಲ ಕಾಯಬೇಕಿಲ್ಲ. ಪ್ರಕಾಶ್‌ಸಿಂಗ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ನಿರ್ದೇಶನದಂತೆ ಪೊಲೀಸರ ಸೇವಾ ಅವಧಿ ನಿಗದಿಪಡಿಸಬೇಕು. 2– 3 ತಿಂಗಳಿಗೊಮ್ಮೆ ಠಾಣೆಯಿಂದ ಠಾಣೆಗೆ ವರ್ಗಾವಣೆ ಬೇಡ’ ಎಂದೂ ಹೈಕೋರ್ಟ್ ಕೆಲವು ಪ್ರಮುಖ ಸಲಹೆಗಳನ್ನೂ ರಾಜ್ಯಸರ್ಕಾರಕ್ಕೆ ನೀಡಿದೆ.

ಆದರೆ ಕೊಲೆ ಪ್ರಕರಣದ ತನಿಖೆ ವಿಳಂಬವಾಗುವುದು ಏಕೆ? ಕೆಳಹಂತದ ನ್ಯಾಯಾಲಯದಲ್ಲಿ ಕೊಲೆ ಪ್ರಕರಣವೊಂದು ಇತ್ಯರ್ಥವಾಗಲು ಕನಿಷ್ಠ ನಾಲ್ಕು ವರ್ಷ ಬೇಕು! ಅಲ್ಲಿಂದ ಸೆಷನ್ಸ್ ಕೋರ್ಟ್‌ಗೆ ಬಂದರೆ ಅಲ್ಲಿ ಒಂದೆರಡು ವರ್ಷ! ಇನ್ನು ಪ್ರಕರಣ ಸುಪ್ರೀಂಕೋರ್ಟ್‌ವರೆಗೆ ಹೋಯಿತೆಂದರೆ ಕನಿಷ್ಠ 7–8 ವರ್ಷ! ನ್ಯಾಯ ನಿಧಾನ ಎಂದರೆ– ನ್ಯಾಯವನ್ನು ನಿರಾಕರಿಸಿದಂತೆಯೇ ಅಲ್ಲವೆ? ಸುಧಾರಣೆ ಎಲ್ಲ ನಿಟ್ಟಿನಲ್ಲಿಯೂ ಆಗಬೇಕಲ್ಲವೆ?

■ **ಗುಡಿಹಳ್ಳಿ ನಾಗರಾಜ**

**ಅತ್ಯಾಚಾರ, ಕೊಲೆ ಪ್ರಕರಣದ ಆರೋಪಿಗಳು ಸಾಮಾನ್ಯವಾಗಿ ಸಾಕ್ಷಿಗಳ ಕೊರತೆಯಿಂದ ಬಚಾವಾಗಿಬಿಡುತ್ತಾರೆ. ಕೊಲೆ ಪ್ರಕರಣದ ಬಗ್ಗೆ ಸಿಕ್ಕುವ ಚಿಕ್ಕದೊಂದು ಸುಳಿವನ್ನು ಜತನದಿಂದ ಕಾಪಾಡಿ, ಅದಕ್ಕೆ ಪೂರಕವಾಗುವ ಅಂಶಗಳನ್ನು ಶೋಧಿಸುವ ನೈಪುಣ್ಯತೆಯ ಕೊರತೆ– ಸಾಕ್ಷಿಗಳು ನಾಶವಾಗಲು ಒಂದು ಕಾರಣವಾದರೆ; ಭ್ರಷ್ಟಾಚಾರ ಇದರ ಮತ್ತೊಂದು ಕರಾಳ ಮುಖವಾಗಿದೆ.**



ಗಣೇಶ ಅರಳೀಕಟ್ಟೆ